ದುಡ್ಡು ಸುಮ್ಮನೆ ಕೊಟ್ಟರೆ ಬೆಲೆಯಿರುವುದಿಲ್ಲ.. ಸಾಲ ಎಂದು ಕೊಟ್ಟರೆ ತೀರಿಸುವ ಜವಾಬ್ದಾರಿಯಿರುತ್ತದೆ.. ಜವಾಬ್ದಾರಿ ಕೆಲಸ ಮಾಡಲು ಪ್ರೇರೇಪಿಸುತ್ತದೆ... ಬೆಂಗಳೂರಿನಿಂದ ಸ್ತ್ರೀಶಕ್ತಿಯ ಸಂಚಾಲಕಿಯೊಬ್ಬಳನ್ನು ಕರೆಸಿ.. ಮೊದಲು ತರಬೇತಿ ಕೊಡಿಸಿದ್ದು ಎಂಟು ಮಹಿಳೆಯರಿಗೆ ಹಪ್ಪಳ ತಯಾರಿಸಲು... ಹಿಟ್ಟು, ಉಪ್ಪು, ಕಟ್ಟಲು ಕವರ್, ದಾರ ತರಿಸಿಕೊಡುವುದು.. ನಂತರ ಮಾರಾಟ ಮಾಡಲು ಸಹಾಯ ಮಾಡುವುದು... ಈ ಸುತ್ತು ಕೆಲಸಕ್ಕೆ ನರಹರಿ ಎಂಬ ಹುಡುಗ... ಶುರುವಾಗಿದ್ದು ಹಾಗೆ... ಮೂರು ವರ್ಷದಲ್ಲಿ ಹಪ್ಪಳದೊಂದಿಗೆ ಬಾಳಕ, ಉಪ್ಪಿನಕಾಯಿ ಮಾಡುವವರೆಗೂ ಬೆಳೆದಿದೆ... ಊದು ಬತ್ತಿ ಹೊಸೆಯುವುದು, ಕ್ಯಾಂಡೆಲ್ ಮಾಡುವುದು ಕಳೆದ ವರ್ಷ ಶುರುವಾಗಿದೆ. ಈ ವರ್ಷ ಬೊಂಬೆ, ಮೆತ್ತೆನೆಯ ಬೊಂಬೆ ತಯಾರಿಸುವ ಬಗ್ಗೆ ತರಬೇತಿ ನೀಡಲು ಯಾರನ್ನಾದರೂ ಕಳಿಸಲು ಕೇಂದ್ರಕ್ಕೆ ಹೇಳಿದ್ದೇನೆ.. ಒಟ್ಟು ನೂರ ನಲವತ್ತು ಮಹಿಳೆಯರು ಭಾಗಿಯಾಗಿದ್ದಾರೆ... ನನಗೆ ಎರಡು ಮೂರು ಗಂಟೆಯ ಕೆಲಸವಷ್ಟೇ... ಲಾಭವಿಲ್ಲ... ನಷ್ಟವಿಲ್ಲ. ಆದರೆ ತೃಪ್ತಿ ಅಪಾರ... ಕಳೆದ ವಾರವಷ್ಟೇ.. ಟಿ.ವಿ. ಚಾನೆಲಿನಲ್ಲಿ ಸಂದರ್ಶನ ಮಾಡುತ್ತೇವೆ ಎಂದು ಕೋರಿಕೆಯೊಂದಿಗೆ ಬಂದಿದ್ದರು. ಇಲ್ಲ ಎಂದು ಹೇಳಿ ಕಳಿಸಿಯಾಯಿತು. ಅತ್ತೆಗೆ ನನ್ನ ಕೆಲಸದ ಬಗ್ಗೆ ಉಡಾಫೆ; ಮಾವನವರಿಗೆ ಅಸಡ್ಡೆ, ಇವರಿಗೆ ಹಾಸ್ಯ. ಅಜ್ಜಿಗೆ ಬೇಕೇ ಇಲ್ಲ.

ಲಾಭ ನಷ್ಟವಿಲ್ಲ ಎಂದಿದ್ದು. ನನಗೆ.. ಲಾಭವಿದೆ. ಅದನ್ನು ದುಡಿಯುತ್ತಿರುವ ಮಹಿಳೆಯರಿಗೇ ಹಂಚುತ್ತೇನೆ. ಕೊಟ್ಟ ಸಾಲ ಹಿಂತಿರುಗಿ ಪಡೆಯುತ್ತೇನೆ. ಆದರೆ ಬಡ್ಡಿ ಇಲ್ಲ...

ಹೆಚ್ಚಿನ ಏರಿಳತವಿಲ್ಲದೆ ಬದುಕು ಸಾಗುತ್ತಿದ್ದರೆ ಆ ಭಗವಂತನಿಗೆ ನೆಮ್ಮದಿ ಇರುವುದಿಲ್ಲವೇನೋ ಇವರಿಗೆ ಈಗ ಹೊಸ ಹುಚ್ಚು ರಾಜಕೀಯದ್ದು.. ರಾಜಕೀಯಕ್ಕಿಳಿದು, ಚುನಾವಣೆಗೆ ನಿಲ್ಲುವ ಸಿದ್ಧತೆ. ಅದಕ್ಕಾಗಿ ವಿರೋಧ ಪಕ್ಷವೋ. ಆಡಳಿತ ಪಕ್ಷವೋ ಸೇರುವ ಹುನ್ನಾರು.. ಇವರ ಬಳಿ ಹೇರಳವಾಗಿ ಆಸ್ತಿ ಇದೆ ಎಂದು ತಿಳಿದಿರುವ ಎರಡೂ ಪಕ್ಷದ ಧುರೀಣರೂ ಇವರೊಂದಿಗೆ ಮಾತು ಕಥೆ ನಡೆಸುತ್ತಿದ್ದಾರೆ. ಕಳೆದ ಎರಡು ತಿಂಗಳಿಂದ ಇದೇ ಮಾತು.. ವ್ಯವಹಾರ... ಅವರನ್ನೆಲ್ಲಾ ನೋಡಿದರೆ, ಅವರ ಕೃತಕ ನಗು, ಮಾತು ಕೇಳಿದರೆ ನನಗೆ ಮೈಯೆಲ್ಲಾ ಉರಿ.. ಆದರೆ ಇವರಿಗೆ ಅವರ ಮಾತು, ನಡತೆ, ಕೃತಕ, ಅಸಹಜ ಎಂದು ಅನ್ನಿಸಿಯೇ ಇಲ್ಲ. ಇನ್ನು ಯಾವುದೋ ಪಕ್ಷಕ್ಕೆ ಸೇರಿ.. ಲಕ್ಷಾಂತರ ರೂಪಾಯಿ ಪೋಲು ಮಾಡುವುದು ಸತ್ಯ ಎಂದು ಖಚಿತವಾದಾಗ ನಾನು ಮಾತಾಡಿದ್ದು, ನನ್ನ ವ್ಯವಹಾರದಲ್ಲಿ ಮೂಗು ತೂರಿಸಬೇಡ ಎಂದು ಅನ್ನಿಸಿಕೊಂಡಿದ್ದು. ಅವರ ವ್ಯವಹಾರಕ್ಕೂ, ನನಗೂ ಹೇಗೆ ಸಂಬಂಧವಿಲ್ಲದೆ ಇರುತ್ತದೆ...? ಅತ್ತೆ, ಮಾವ ತಮಗೂ ಇದಕ್ಕೂ ಸಂಬಂಧವೇ ಇಲ್ಲವೇನೋ ಎಂಬಂತೆ ಇದ್ದರೆ ಮಾಡುವುದೇನು?

ಅವನ್ಯಾಕೆ ಹಾಗೆ ಕೋಪಿಸಿಕೊಂಡು ಹೋದ? ನೀನೇನಂದೆ ಅವನಿಗೆ?

ಅತ್ತೆಯ ದನಿ. ಅವರತ್ತ ತಿರುಗಿದೆ. ನನ್ನ ವ್ಯವಹಾರದಲ್ಲಿ ಮೂಗು ತೂರಿಸಬೇಡ ಎಂದು ಹೇಳಿ.... ನೀನೆಲ್ಲಿಗೆ ಹೋಗ್ತೀಯಾ ಇಲ್ಲಿ ಇರದೆ?! ಎಂದು ವ್ಯಂಗ್ಯವಾಡಿ ಇವರು ಹೋಗಿ ಎಷ್ಟು ಹೊತ್ತಾಯಿತ್ತೋ.... ಕಳೆದ ಹದಿನಾಲ್ಕು ವರ್ಷದ ಜೀವನ ಮನಃಪಟಲದಲ್ಲಿ ಸುಳಿದು ನನ್ನನ್ನು ಪೆಚ್ಚು ಮಾಡಿತು. ಹದಿನಾಲ್ಕು ವರ್ಷ!... ನನ್ನ ಜೀವನದ ಮೊದಲ ಇಪ್ಪತ್ತು ವರ್ಷ ಅಪ್ಪನ ಆಸರೆಯಲ್ಲಿ, ಅಮ್ಮನ ಕಟ್ಟುಪಾಡಿನಲ್ಲಿ.. ಆಡುತ್ತಾ, ಕನಸು ಕಾಣುತ್ತಾ ಕಳೆದಿದ್ದಾಯಿತು... ನಂತರದ ಹದಿನಾಲ್ಕು ವರ್ಷ ಇವರ ಆಸರೆಯಲ್ಲಿ.. ಈ ಮನೆಯ ಆಶ್ರಯದಲ್ಲಿ.. ಕನಸುಗಳ ಭ್ರಮೆ ಕಳೆಯುತ್ತಾ ಕಳೆದದ್ದಾಯಿತು... ಈಗ ಇವರು ರಾಜಕೀಯದ ಬಿಸಿಲ್ಗುದುರೆ ಏರಿ ಹೊರಟರೆ.. ಹಳ್ಳಿಮನೆ ಆಸ್ತಿ ಉಳಿಯುತ್ತದೆಯೇ? ಕಟ್ಟಿದ ಕನಸುಗಳು ಕರಗಿಯಾಗಿವೆ. ಮುಂದಿರುವುದು ದುಃಸ್ವಪ್ನಗಳೇ...

ನಿನ್ನೇ ಕೇಳಿದ್ದು... ಊಟವೂ ಮಾಡದೆ ಅವನು ಹೋದ ನೀನು ಇಲ್ಲಿ ಕೂತಿದ್ದೀಯ.. ಅಷ್ಹೊತ್ತಿನಿಂದ ನೋಡ್ತಾ ಇದೀನಿ. ಮಲ್ಗಿ ಬಿಟ್ಟಿದ್ಯ ಏನು?..

ಅತ್ತೆ ಬಳಿ ಬಂದಾಗ ಇಲ್ಲ ಎನ್ನುವಂತೆ ತಲೆಯಾಡಿಸಿದೆ.

ಅತ್ತೆ.. ಈಗ ಅವರು ಏನು ಪ್ಲಾನ್ ಮಾಡ್ತಾ ಇದ್ದಾರೆ ಗೊತ್ತಾ ನಿಮ್ಗೆ?... ಮೆಲ್ಲನೆ ಕೇಳಿದೆ.

ಹೆಂಗಸು ನೀನೇ ನೂರೆಂಟು ವ್ಯವಹಾರ ಮಾಡ್ತಾ ಈಗ... ಸ್ತ್ರೀಶಕ್ತಿ ಅನ್ನೋದೇನು? ಸಾಲು ಕೊಡೋದೇನು? ಲೆಕ್ಕಾಚಾರವೇನು...? ಸನ್ಮಾನ ಬೇರೆ ನಿಂಗೆ.. ನಾವೇನಾದರೂ ಚಕಾರವೆತ್ತಿದೀವಾ? ಅವನೂ ಏನೂ ಹೇಳಿಲ್ಲ.. ಗಂಡ್ಸು ಅವ್ನು. ನೂರೆಂಟು ವ್ಯವಹಾರವಿರುತ್ತೆ.. ನೀನ್ಯಾಕೆ ಪ್ರಶ್ನಿಸೋಕ್ಕೆ ಹೋಗ್ತಾ?.

ಅಲ್ಲ ಅತ್ತೆ ರಾಜಕೀಯಕ್ಕಿಳೀತಾರಂತೆ... ರಾಜಕೀಯ ನಮ್ಮಂಥವರಿಗಲ್ಲ.. ನೀವೂ.. ಮಾವ ಹೇಳಿ ಅವರಿಗೆ

ನಲವತ್ತು ವರ್ಷದ ಗಂಡಸು ಅವ್ನು ಇನ್ನೂ ನಮ್ಮ ಹತ್ತಿರ ಬುದ್ಧಿ ಹೇಳಿಸಿಕೊಳ್ಳಬೇಕೇ? ಬುದ್ಧಿ ಹೇಳಿ ಅಂತ ನೀನು ಹೇಳಿ ಅಂತ ನಾವು ಕೇಳಬೇಕೇ?. ಏಳು ಇವತ್ತು ರತ್ನಮ್ಮ ಬಂದಿಲ್ಲ ದೋಸೆಗೆ ಹಾಕಿದ್ದೇನೆ.. ಮಿಕ್ಸಿಗೆ ಹಾಕಿ ಕೊಡು....

ಎದ್ದು ಅವರನ್ನು ಹಿಂಬಾಲಿಸಿದೆ.

ಅತ್ತೆ ರಾಜಕೀಯ ನಮ್ಮಂಥವರಿಗಲ್ಲ... ಇವರ ಬಳಿ ದುಡ್ಡಿದೆ ಅಂತಲೇ ರಾಜಕೀಯ ಪಕ್ಷಗಳು ಬಂದಿರುವುದು.. ಇವರನ್ನು ಉಬ್ಬಿಸುತ್ತಿರುವುದು.. ಒಂದು ಎಲೆಕ್ಷನ್ನಿಗೆ ನಿಂತರೆ ಕೋಟಿಗಟ್ಟಲೆ ಖರ್ಚು ಮಾಡುತ್ತಾರೆ.

(ಸಶೇಷ)




### ಕಾದಂಬರಿ ಮುದ ನೀಡಿತು

'ಕಸೂತಿ ಮತ್ತು ಕಪ್ಪುಕಲೆ' ನೀಳಾ ದೇವಿ ಅವರ ಕಾದಂಬರಿ ಮುದ ನೀಡಿತು.

—ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ಪೂರ್ಣಿಮಾ ಮೂರ್ತಿ ಬೆಂಗಳೂರು, ಉಷಾ ರಾಜಾರಾವ್ ಬೆಂಗಳೂರು, ರಘೋತ್ತಮ ಮೈಸೂರು

### ಶೀರ್ಷಿಕೆ, ಚಿತ್ರಗಳು ಇಷ್ಟವಾದವು

ಧಾರಾವಾಹಿಯ ಆರಂಭದ ಕಂತುಗಳಲ್ಲಿ 'ರಹಸ್ಯ' ಕಾಪಾಡಿದಂತೆ ಕಂಡುಬಂತು. ಆದರೆ ಕೊನೆಯಲ್ಲಿ 'ಸಂಪ್ರದಾಯ'ದ ಚೌಕಟ್ಟನ್ನು ಮುರಿದು ಗಂಗೆ–ಪ್ರಸಾದರು ಕೂಡಿ ಬಾಳುವುದನ್ನು ಬಿಟ್ಟು ಆಧುನಿಕ ಮನೋಭಾವಕ್ಕೆ ಕಡಿವಾಣ ಹಾಕುವಂತೆ ಚಿತ್ರಿಸಿದ್ದು ನಿರೀಕ್ಷೆಗೆ ವಿರುದ್ಧವಾಗಿತ್ತು. ಕಥೆಯ ಶೀರ್ಷಿಕೆ ಮತ್ತು ಚಿತ್ರಗಳು ಇಷ್ಟವಾದವು.

—ಶ್ವೇತಾ ಸುರೇಶ ಪಾಟೀಲ, ಗದಗ

### ಸಾಮಾನ್ಯ ಧಾರಾವಾಹಿ

ಹದಿನಾಲ್ಕು ವಾರ ಪ್ರಕಟವಾಗಿದ ಇದು ಅತಿ ಸಾಧಾರಣ ಕಾದಂಬರಿ ಎನಿಸಿತು. ಅದು ಅಂಥ ವಿಶೇಷ ಕಥಾ ಹಂದರವನ್ನು ಹೊಂದಿರಲಿಲ್ಲ.

—ಸುಂದರ್, ಬೆಂಗಳೂರು

### ಕಾದಂಬರಿ ನಿರಾಸೆ ಮೂಡಿಸಿತು

ಭಾಷೆ, ಶೈಲಿ ಚೆನ್ನಾಗಿದ್ದರೂ ಕಥಾ ವಸ್ತು ಸಪ್ಪೆ ಎನಿಸಿತು. ಒಟ್ಟಿನಲ್ಲಿ ಈ ಕಾದಂಬರಿಕಾರ್ತಿ ಬಗ್ಗೆ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದ್ದ ನಮಗೆ ಕಾದಂಬರಿ ನಿರಾಸೆ ಮೂಡಿಸಿತು.

—ಮಂಜುಳಾ ಹಾಸನ, ಚಿದಾನಂದ ಪೈ ಮಂಗಳೂರು

### ಸಪ್ಪೆ ಧಾರಾವಾಹಿ

ಧಾರಾವಾಹಿ ಬಹಳ ಸಪ್ಪೆಯಾಗಿ ಮೂಡಿಬಂತು.

—ಎಸ್.ವಿಜಯಕುಮಾರಿ ಬೆಂಗಳೂರು

### ಖುಷಿ ಕೊಡಲಿಲ್ಲ

ಈ ಕಥೆಗಾರ್ತಿಯ ಅನೇಕ ಕಾದಂಬರಿ ಓದಿದ ನನಗೆ ಈ ಧಾರಾವಾಹಿ ಕಥಾವಸ್ತು, ನಿರೂಪಣೆ ಕೊಂಚವೂ ಖುಷಿ, ತೃಪ್ತಿ ಕೊಡಲಿಲ್ಲ. ಲೇಖಕಿ ಆತುರಾತುರವಾಗಿ ಕಾದಂಬರಿ ಮುಗಿಸಲು ಹೊರಟು ಪ್ರಸಾದಪ್ಪ ತಾನು ಮಾಡಿದ ತಪ್ಪಿಗೆ ತನ್ನ ಎದೆಗೆ ಬರೆ ಎಳೆದುಕೊಳ್ಳುವಂತೆ ಕೊನೆಯ ಗಂಗಾಳ ಬದುಕಿಗೆ ಬರೆ ಎಳೆದ ತನ್ನ ಸಾವಿನ ಮೂಲಕ.

—ಕೊಹಿಮ ಬಸರಕೋಡು